## ಕರ್ನಾಟಕ ಸರ್ಕಾರ

# ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿ | ಪ್ರತಿವಾದಿ |
|---|---|
| 1 ಆರ್.ಮೆಹಬೂಬ್ ಬಾಷಾ ತಂದೆ ರಾಜಾಸಾಬ್<br>2 ಶರಣಪ್ಪ ಗೌಡ ಗೌಡರ ತಂದೆ ಶಂಕ್ರಗೌಡ | ಕಂದಾಯ ನಿರೀಕ್ಷಕರು<br>ಕಂಪ್ಲಿ |

**ಪೀಠಿಕೆ:-**

ಹೊಸಪೇಟೆ ತಾಲೂಕಿನ ಸೋಮಲಾಪುರ ಗ್ರಾಮದ ಸರ್ವೆ ನಂ 27/ಸಿ2 ವಿಸ್ತೀರ್ಣ 1.00 ಎಕರೆ ಆರ್.ಮೆಹಬೂಬ್ ಬಾಷಾ ತಂದೆ ರಾಜಾಸಾಬ್ ಇವರು ತಮ್ಮ ಹಕ್ಕು ಸ್ವಾದೀನಾನಭವದಲ್ಲಿರುವ ಪ್ರಸ್ತಾಪಿತ ಜಮೀನನ್ನು ನೋಂದಣಿ ದಸ್ತವೇಜ ಸಂಖ್ಯೆ ಕೆಪಿಎಲ್-1-02512/2015-16 ದಿನಾಂಕ 22-02-2016 ರಲ್ಲಿ ಶರಣಪ್ಪ ಗೌಡ ಗೌಡರ ತಂದೆ ಶಂಕ್ರಗೌಡ , ಕಂಪ್ಲಿ ಇವರಿಗೆ ಖಂಡಿತ ಕ್ರಯ ಮಾಡಿ ಕೊಟ್ಟಿದ್ದು ಸದರಿ ಕ್ರಯಪತ್ರವನ್ನು ನೋಂದಣಿ ಮಾಡಿಸಿರುತ್ತಾರೆ ಸದರಿ ನೊಂದಣಿ ಪತ್ರದ ಆಧಾರದ ಮೇಲೆ ಹಕ್ಕು ಬದಲಾವಣಿ ಸಂಖ್ಯೆ ಹೆಚ್ 29/2015-16 ರ ದಿನಾಂಕ 22-2-2016 ರಂದು ಚೆಕಲಿಸ್ಟ ಮತ್ತು ನಮೂನೆ 21 ತಯಾರಾಗಿದ್ದು ದಸ್ತವೇಜ ವಿವರಗಳ ಹಕ್ಕು ಬದಲಾವಣಿ ವಿವರಗಳೂಂದಿಗೆ ಹಕ್ಕು ಬದಲಾವಣಿ ಪ್ರಕರಣವನ್ನು ಕಂದಾಯ ನಿರೀಕ್ಷಕರು ಕಂಪ್ಲಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿತ್ತು.

ಹಕ್ಕು ಬದಲಾವಣಿ ಆದೇಶದಲ್ಲಿ ನಮೂನೆ 21 ರ ನೋಟಿಸಿಗೆ ಆಸಕ್ತರಿಗೆ ಜಾರಿಯಾಗಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಮುಖ್ಯ ಸ್ವಾಧೀನದಾರರ ಕೋರಿಕೆ ಮೇರೆಗೆ ಸದ್ರಿ ಹಕ್ಕು ಬದಲಾವಣೆಯನ್ನು ತಿರಸ್ಕರಿಸಿ ಕಂದಾಯ ನಿರೀಕ್ಷಕರು ಕಂಪ್ಲಿ ಇವರು ಮುಂದಿನ ವಿಚಾರಣಿಗೆ ತಹಶೀಲ್ದಾರರಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 09-06-2016 ರಂದು ಪ್ರಾರಂಬಿಸಿ ದಿನಾಂಕ 18-06-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದಲ್ಲಿ ವಿಚಾರಣೆಗೆ ಕರೆಯಲಾಗಿ ವಾದಿಗಳು ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ. ಮತ್ತು ಖರೀದಿದಾರರು ಮತ್ತು ಮಾರಾಟಗಾರರು ದಸ್ತವೇಜ ಸಂಖ್ಯೆ ಕೆಪಿಎಲ್-1 02512/2015-16 ದಿನಾಂಕ 22-02-2016 ಪ್ರಕಾರ ಹಕ್ಕುಬದಲಾವಣೆ ಮಾಡವಂತೆ ಹೇಳಿಕೆ ನೀಡಿರುತ್ತಾರೆ. ಕಾರಣ ಈ ಕೆಳಗಿನಂತೆ.

**ದಿನಾಂಕ:- 1-9-2016**

**ಸಂ/ಕಂ/ಪಹಣಿ/ವಿವಾದ/9/2016-17**

## ಆದೇಶ

ಪ್ರಕರಣದ ಹಿನ್ನಲೆ ವಾಸ್ತವಂಶ ಹಾಗೂ ದಾಖಲೆಗಳನ್ವಯ ಹೊಸಪೇಟೆ ತಾಲೂಕಿನ ಸೋಮಲಾಪುರ ಗ್ರಾಮದ ಸರ್ವೆ ನಂ 27/ಸಿ2 ವಿಸ್ತೀರ್ಣ 1.00 ನೊಂದಾಯಿತ ದಸ್ತಾವೇಜು ಸಂಖ್ಯೆ ಕೆಪಿಎಲ್-1 02512/2015-16 ದಿನಾಂಕ 22-02-2016 ರನ್ವಯ ಕ್ರಯದಾರರಾದ ಶ್ರೀ ಶರಣಪ್ಪ ಗೌಡ ಗೌಡರ ತಂದೆ ಶಂಕ್ರಗೌಡ ಇವರ ಹೆಸರಿಗೆ ಹಕ್ಕು ಬದಲಾವಣಿ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 1-9-2016 ರಂದು ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು, ಹೊಸಪೇಟೆ

ಗೆ,
ವಾದಿ ಮತ್ತು ಪ್ರತಿವಾದಿಗಳಿಗೆ
ಕಂದಾಯ ನಿರೀಕ್ಷಕರು, ಕಂಪ್ಲಿ ಮತ್ತು ಭೂಮಿ ಕೇಂದ್ರ